ಸಂಪುಟ : 40 ಸಂಚಿಕೆ 125 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 01 ಜೂನ್ 2017 ಗುರುವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com




2016-17ನೇ ಸಾಲಿನ ಯುಪಿಎಸ್‌ಸಿ ಫಲಿತಾಂಶ : ಮೊದಲ ಸ್ಥಾನ ಪಡೆದ ಕರ್ನಾಟಕದ ಕೆ.ಆರ್.ನಂದಿನಿ




ನೋಟು ನಿಷೇಧದ ಎಫೆಕ್ಟ್: 2016-17ನೇ ಸಾಲಿನಲ್ಲಿ ಜಿಡಿಪಿ ಶೇ. 7.1 ಕ್ಕೆ ಕುಸಿತ

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಇಂಗ್ಲೆಂಡ್-ಬಾಂಗ್ಲಾದೇಶ ನಡುವೆ ಉದ್ಘಾಟನಾ ಪಂದ್ಯ






## ಪಾರ್ವತಮ್ಮನವರ ಕಣ್ಣುಗಳ ದಾನ

**ಬೆಂಗಳೂರು**

ಬುಧವಾರ ನಿಧನರಾದ ಪಾರ್ವತಮ್ಮ ರಾಜ್‌ಕುಮಾರ್ ಅವರು ತಮ್ಮ ಎರಡು ಕಣ್ಣುಗಳನ್ನೂ ದಾನ ಮಾಡುವ ಮೂಲಕ ಸಾವಿನ ನಂತರವೂ ಇಬ್ಬರು ಅಂಧರ ಬಾಳಿಗೆ ಬೆಳಕಾಗಿದ್ದಾರೆ.

ಬುಧವಾರ ಬೆಳಗಿನ ಜಾವ ನಿಧನರಾದ ಪಾರ್ವತಮ್ಮ ರಾಜ್‌ಕುಮಾರ್ ಅವರ ಕಣ್ಣುಗಳನ್ನು ನಾರಾಯಣ ನೇತ್ರಾಲಯದವರು ಪಡೆದರು. ಡಾ.ರಾಜ್‌ರವರು ಜೀವಂತವಿದ್ದಾಗ ನಾನು ನನ್ನ ಹೆಂಡತಿ, ಮಕ್ಕಳು, ಮೊಮ್ಮಕ್ಕಳು, ನನ್ನ ಕುಟುಂಬದ ಎಲ್ಲರೂ ನೇತ್ರದಾನ ಮಾಡುವುದಾಗಿ ತಿಳಿಸಿದ್ದರು. ಅದರಂತೆ

>>> 5ನೇ ಪುಟಕ್ಕೆ

# ಸಿದ್ದರಾಮಯ್ಯ ನೇತೃತ್ವದಲ್ಲೇ ಮುಂದಿನ ಚುನಾವಣೆ

## ಎಸ್.ಆರ್.ಪಾಟೀಲ್ ಮತ್ತು ಡಿ.ಕೆ.ಶಿವಕುಮಾರ್‌ಗೆ ನೂತನ ಜವಾಬ್ದಾರಿ

**ಬೆಂಗಳೂರು**

ಮುಂದಿನ ವಿಧಾನಸಭಾ ಚುನಾವಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಎದುರಿಸುವುದಾಗಿ ಕಾಂಗ್ರೆಸ್ ಹೈಕಮಾಂಡ್ ಘೋಷಿಸಿದ್ದು, ಈ ಕುರಿತಾದ ಎಲ್ಲಾ ಊಹಾಪೋಹಗಳಿಗೆ ತೆರೆ ಎಳೆದಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಜಿ.ಪರಮೇಶ್ವರ್ ಅವರನ್ನೇ ಮುಂದುವರಿಸಿ ಆದೇಶ ಹೊರಡಿಸಿದೆ. ಈ ಮೂಲಕ ಅತಿ ಹೆಚ್ಚು ಕಾಲ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಹೊಸ ದಾಖಲೆಗೆ ಅವರು ಪಾತ್ರರಾಗಿದ್ದಾರೆ.

ಇಂಧನ ಸಚಿವ ಡಿ.ಕೆ.ಶಿವಕುಮಾರ್ ಅವರನ್ನು ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಎಐಸಿಸಿ, ಹಿರಿಯ ನಾಯಕ ಎಸ್.ಆರ್.ಪಾಟೀಲರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದೆ.

ಹಾಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಅವರು ಇನ್ನು ಮುಂದೆ ದಕ್ಷಿಣ ಕರ್ನಾಟಕವನ್ನು ಪ್ರತಿನಿಧಿಸಿದರೆ, ಎಸ್.ಆರ್. ಪಾಟೀಲ್ ಅವರು ಉತ್ತರ ಕರ್ನಾಟಕದಲ್ಲಿ ಪಕ್ಷದ ಸಂಘಟನೆ ಮತ್ತು ಉಸ್ತುವಾರಿ ನೋಡಿಕೊಳ್ಳಲಿದ್ದಾರೆ.

ಈ ಮಧ್ಯೆ ಮಾಜಿ ಕೇಂದ್ರ ಸಚಿವ ವಿ.ಮುನಿಯಪ್ಪ ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಆಹ್ವಾನಿತರನ್ನಾಗಿ ಹಾಗೂ ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಎಐಸಿಸಿ ಕಾರ್ಯದರ್ಶಿಯನ್ನಾಗಿ ನೇಮಿಸಿ ಅಚ್ಚರಿ ಮೂಡಿಸಿದೆ.

ರಾಜ್ಯದಲ್ಲಿ ಮರಳಿ ಅಧಿಕಾರಕ್ಕೆ ಬರುವ ದೃಷ್ಟಿಯಿಂದ ರಣತಂತ್ರ ಹೆಣೆಯುತ್ತಿರುವ ಕಾಂಗ್ರೆಸ್ ಹೈಕಮಾಂಡ್ ಅದರ ಭಾಗವಾಗಿ



ಈ ನೇಮಕಾತಿಗಳನ್ನು ಮಾಡಿದ್ದು,ಅದೇ ಕಾಲಕ್ಕೆ ಪಕ್ಷದ ಸಂಘಟನೆಯ ಮೇಲೆ ಪೂರ್ಣ ಗಮನ ನೀಡುವ ದೃಷ್ಟಿಯಿಂದ ಪರಮೇಶ್ವರ್ ಅವರು ತಕ್ಷಣವೇ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಸೂಚಿಸಿದೆ.

ಸಧ್ಯದ ಸ್ಥಿತಿಯಲ್ಲಿ ದಲಿತ ನಾಯಕರನ್ನು ಕೆಪಿಸಿಸಿ ಅಧ್ಯಕ್ಷ ಪದವಿಯಿಂದ ಕೆಳಗಿಳಿಸುವುದು ಸರಿಯಲ್ಲ ಎಂದು ಬಹುತೇಕ ನಾಯಕರು ಅಭಿಪ್ರಾಯ ಪಟ್ಟಿದ್ದರಿಂದ ಪರಮೇಶ್ವರ್ ಅವರನ್ನೇ ಕೆಪಿಸಿಸಿ ಅಧ್ಯಕ್ಷರನ್ನಾಗಿ ಮುಂದುವರಿಸಲು ಎಐಸಿಸಿ ತೀರ್ಮಾನಿಸಿತು.

ಆದರೆ ಗೃಹ ಸಚಿವ ಸ್ಥಾನವನ್ನು ಇದ ಕ್ಕಾಗಿ ಪರಮೇಶ್ವರ್ ತೊರೆಯಬೇಕು ಎಂದು ಅದು ಸೂಚಿಸಿದ್ದು,ಅದೇ ಕಾಲಕ್ಕೆ ಲಿಂಗಾಯತ ರೊಬ್ಬರನ್ನು ಕಾರ್ಯಾಧ್ಯಕ್ಷ ಸ್ಥಾನಕ್ಕೆ ಮತ್ತು ಒಕ್ಕಲಿಗ ನಾಯಕರಿಗೆ ಪ್ರಚಾರದ ಸಾರಥ್ಯವನ್ನು ವಹಿಸಿದೆ.

ದಲಿತ ನಾಯಕ ವಿ.ಮುನಿಯಪ್ಪ ಅವರು ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಆಹ್ವಾನಿತರಾಗಿದ್ದು,ವಾಲ್ಮೀಕಿ ಸಮುದಾಯದ ನಾಯಕ ಸತೀಶ್ ಜಾರಕಿಹೊಳಿ ಅವರನ್ನು

> **ಸಧ್ಯದ ಸ್ಥಿತಿಯಲ್ಲಿ ದಲಿತ ನಾಯಕರನ್ನು ಕೆಪಿಸಿಸಿ ಅಧ್ಯಕ್ಷ ಪದವಿಯಿಂದ ಕೆಳಗಿಳಿಸುವುದು ಸರಿಯಲ್ಲ ಎಂದು ಬಹುತೇಕ ನಾಯಕರು ಅಭಿ ಪ್ರಾಯ ಪಟ್ಟಿದ್ದರಿಂದ ಪರಮೇಶ್ವರ್ ಅವರನ್ನೇ ಕೆಪಿಸಿಸಿ ಅಧ್ಯಕ್ಷರನ್ನಾಗಿ ಮುಂದುವರಿಸಲು ಎಐಸಿಸಿ ತೀರ್ಮಾನಿಸಿತು.ಆದರೆ ಗೃಹ ಸಚಿವ ಸ್ಥಾನವನ್ನು ಇದ ಕ್ಕಾಗಿ ಪರಮೇಶ್ವರ್ ತೊರೆಯಬೇಕು ಎಂದು ಅದು ಸೂಚಿಸಿದ್ದು,ಅದೇ ಕಾಲಕ್ಕೆ ಲಿಂಗಾಯತ ರೊಬ್ಬರನ್ನು ಕಾರ್ಯಾಧ್ಯಕ್ಷ ಸ್ಥಾನಕ್ಕೆ ಮತ್ತು ಒಕ್ಕಲಿಗ ನಾಯಕರಿಗೆ ಪ್ರಚಾರದ ಸಾರಥ್ಯವನ್ನು ವಹಿಸಿದೆ.**

ಎಐಸಿಸಿ ಕಾರ್ಯದರ್ಶಿಯನ್ನಾಗಿ ನೇಮಕ ಮಾಡುವ ಮೂಲಕ ಅವರ ಅತೃಪ್ತಿಯನ್ನು ಹೋಗಲಾಡಿಸಿದೆ.

**ಬೇಸರವಿಲ್ಲ:** ಕೆಪಿಸಿಸಿ ಅಧ್ಯಕ್ಷರಾಗಿ ತಮ್ಮನ್ನು ಮುಂದುವರೆಸುತ್ತಿರುವುದಕ್ಕೆ ಸಂತಸವಾಗಿದೆ. ಗೃಹ ಖಾತೆ ಕೈ ತಪ್ಪಿದಕ್ಕೆ ತಮಗೆ ಬೇಸರವಿಲ್ಲ ಎಂದು ಡಾ: ಜಿ. ಪರಮೇಶ್ವರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೊದಲೇ ಹೇಳಿದಂತೆ ಹೈಕಮಾಂಡ್ ತೀರ್ಮಾನಕ್ಕೆ ಬದ್ದನಾಗಿದ್ದೇನೆ. ಹಾಗಾಗಿ ಹೈಕಮಾಂಡ್ ಹೇಳಿದ ಹಾಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದರು.

ಗೃಹ ಇಲಾಖೆಯಲ್ಲಿ ಇನ್ನಷ್ಟು ಕೆಲಸಗಳು ಆಗಬೇಕಿತ್ತು. ಮುಂದೆ ಯಾರಿಗೆ ಗೃಹ ಖಾತೆ ಸಿಗುತ್ತದೆಯೋ ಗೊತ್ತಿಲ್ಲ. >>> 5ನೇ ಪುಟಕ್ಕೆ

# ಪಾರ್ವತಮ್ಮ ರಾಜ್‌ಕುಮಾರ್ ಇನ್ನಿಲ್ಲ

**ಬೆಂಗಳೂರು**

ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕಿ, ವರನಟ ರಾಜ್‌ಕುಮಾರ್ ಅವರ ಪತ್ನಿ ಪಾರ್ವತಮ್ಮ ರಾಜ್‌ಕುಮಾರ್ (77) ನಿಧನಹೊಂದಿದರು.

ಬಹು ಅಂಗಾಂಗಳ ವೈಫಲ್ಯದಿಂದ ಬಳಲುತ್ತಿದ್ದ ಪಾರ್ವತಮ್ಮ ರಾಜ್‌ಕುಮಾರ್ ಕಳೆದ ಹಲವು ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಕೆಲ ದಿನಗಳ ಹಿಂದೆ ಇದ್ದಕ್ಕಿದ್ದಂತೆ ಆರೋಗ್ಯ ಹದಗೆಟ್ಟ ಹಿನ್ನೆಲೆಯಲ್ಲಿ ಅವರನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಸೇರಿಸಲಾಗಿತ್ತಾದರೂ ಚಿಕಿತ್ಸೆ ಫಲಕಾರಿಯಾಗದೆ ಬುಧವಾರ ಬೆಳಗ್ಗೆ 4:30 ಕ್ಕೆ ನಿಧನರಾದರು.

ಅವರ ನಿಧನಕ್ಕೆ ಎಲ್ಲೆಡೆಯಿಂದ ಶೋಕ ಸಂದೇಶಗಳು ಹರಿದು ಬಂದಿದ್ದು ಅಪಾರ ಜನಸಾಗರದ ನಡುವೆ ಸಂಜೆ ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ರಾಜ್ ಸ್ಮಾರಕದ ಪಕ್ಕದಲ್ಲೇ ಅಂತ್ಯ ಸಂಸ್ಕಾರ ನಡೆಯಿತು.

ಡಾ.ರಾಜ್ ದಂಪತಿಗಳಿಗೆ 5 ಜನ ಮಕ್ಕಳು. ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಗಂಡು ಮಕ್ಕಳಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಕನ್ನಡ ಚಿತ್ರರಂಗದ ನಾಯಕ ನಟರು.

ಹೆಣ್ಣು ಮಕ್ಕಳಾದ ಪೂರ್ಣಿಮಾ ಹಾಗೂ ಲಕ್ಷ್ಮಿ. ಹಿರಿಯ ಅಳಿಯ ಪಾರ್ವತಮ್ಮನವರ ತಮ್ಮ ಗೋವಿಂದರಾಜು ಹಾಗು ಕಿರಿಯ ಅಳಿಯಚಿತ್ರನಟ ರಾಮ್‌ಕುಮಾರ್.

ಒಟ್ಟು ಹನ್ನೆರಡು ಜನ ಮೊಮ್ಮಕ್ಕಳಿದ್ದು, ಶಿವರಾಜ್‌ಕುಮಾರ್ ಪುತ್ರಿಯಾದ ನಿವೇದಿತಾ, ಅಂಡಮಾನ್ ಮುಂತಾದ ಕೆಲವು ಚಿತ್ರಗಳಲ್ಲಿ ಬಾಲನಟಿಯಾಗಿ ನಟಿಸಿದ್ದಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ



ಎಸ್.ಬಂಗಾರಪ್ಪ ಇವರ ಬೀಗರು. ಬಂಗಾರಪ್ಪನವರ ಪುತ್ರಿಯಾದ ಗೀತಾ, ಶಿವರಾಜ್ ಕುಮಾರ್ ಅವರ ಪತ್ನಿ ಸೇರಿದಂತೆ ಬಂಧು-ಬಳಗ ಹಾಗೂ ಅಪಾರ ಸಂಖ್ಯೆಯ ಕನ್ನಡ ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ.

ಬಳಿಕ ಅವರ ಪಾರ್ಥಿವ ಶರೀರವನ್ನು ಸದಾಶಿವನಗರದ ನಿವಾಸಕ್ಕೆ ತರಲಾಯಿತು. ಅವರ ನಿವಾಸದಲ್ಲಿ ಮಧ್ಯಾಹ್ನದವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ಡಿಸೆಂಬರ್ 6, 1939ರಲ್ಲಿ ಮೈಸೂರಿನ ಸಾಲಿಗ್ರಾಮದಲ್ಲಿ ಜನಿಸಿದ ಪಾರ್ವತಮ್ಮ ವರನಟ ಡಾ. ರಾಜ್ ಕುಮಾರ್ ಅವರನ್ನು 1953 ಜೂ.25 ರಂದು ವಿವಾಹವಾಗಿದ್ದರು. ಮೇರು ನಟ ಡಾ. ರಾಜ್ ಕುಮಾರ್ ರವರ ಧರ್ಮಪತ್ನಿಯಾಗಿ ಈ ಧೀಮಂತ ಮಹಿಳೆ ಕನ್ನಡ ಚಿತ್ರರಂಗಕ್ಕೆ ಶಕ್ತಿಯಾಗಿದ್ದರು.

ಅನಾರೋಗ್ಯದಿಂದ ಬಳಲುತ್ತಿದ್ದ ಪಾರ್ವತಮ್ಮ ಅವರು ಹಲವು ದಿನಗಳಿಂದ ಎಂ.ಎಸ್.ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಕೆಲ ವರ್ಷಗಳಿಂದ ಪಾರ್ವತಮ್ಮ ಅವರು ಕ್ಯಾನ್ಸರ್‌ನಿಂದ ಬಳಲುತ್ತಿದ್ದರು.

ಕ್ಯಾನ್ಸರ್ ಲಿವರ್‌ಗೂ ಹರಡಿತ್ತಲ್ಲದೆ ಮಧುಮೇಹ ಮತ್ತು ರಕ್ತದೊತ್ತಡ ಹೆಚ್ಚಳವಾಗಿತ್ತು. ಅವರು ಜಾಂಡೀಸ್‌ನಿಂದಲೂ ಸಹ ಬಳಲುತ್ತಿದ್ದರು. ಆದರೆ ಬೆಳಗ್ಗೆ ಚಿಕಿತ್ಸೆಗೆ ಸ್ಪಂದಿಸದೆ ಪಾರ್ವತಮ್ಮ ಕೊನೆಯುಸಿರೆಳೆದಿದ್ದಾರೆಂದು ರಾಮಯ್ಯ ಆಸ್ಪತ್ರೆಯ ಡಾ.ಸಂಜಯ್ >>> 5ನೇ ಪುಟಕ್ಕೆ

## ಶಾಲಾ ಮಕ್ಕಳಿಗೆ ಪ್ರೋತ್ಸಾಹ ಯೋಜನೆ

**ತಿಪಟೂರು**

ಶಾಲಾ ಮಕ್ಕಳಿಗೆ ಪ್ರೋತ್ಸಾಹದಾಯಕ ಯೋಜನೆಗಳ ತಾಲ್ಲೂಕು ಮಟ್ಟದ ವಿತರಣಾ ಕಾರ್ಯಕ್ರಮವನ್ನು ಜೂನ್ 3 ರಂದು ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವಿವಿಧ ಶಾಲಾ ಮಕ್ಕಳಿಗೆ ಅಂದು ಸಾಂಕೇತಿಕವಾಗಿ ಪಠ್ಯಪುಸ್ತಕ, ಸಮವಸ್ತ್ರ, ಬೈಸಿಕಲ್ ವಿತರಿಸಲಾಗುವುದು ಎಂದು ಬಿಇಓ ಪ್ರಭುಸ್ವಾಮಿ ತಿಳಿಸಿದ್ದಾರೆ.




# ತಂಬಾಕು ಸೇವನೆಯಿಂದ ಕುಟುಂಬ -ದೇಶಕ್ಕೂ ಹಾನಿ

**ತುಮಕೂರು**

ತಂಬಾಕಿನ ವಿವಿಧ ರೀತಿಯ ಉತ್ಪನ್ನಗಳನ್ನು ಸೇವಿಸುವುದರಿಂದ ಸಂಬಂಧಿಸಿದ ವ್ಯಕ್ತಿಗಷ್ಟೇ ಅಲ್ಲದೆ ಆತನ ಕುಟುಂಬ ವರ್ಗದವರಿಗೆ ಹಾಗೂ ಅಂತಿಮವಾಗಿ ದೇಶಕ್ಕೆ ಹಾನಿ ಆಗುತ್ತದೆ ಎಂದು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಜಿ.ಶಾಂತ ರಾಮ್ ಅಭಿಪ್ರಾಯಪಟ್ಟರು.

ಅವರು ಬುಧವಾರ ಮಧ್ಯಾಹ್ನ ತುಮಕೂರು ನಗರದ ಕೃಷ್ಣರಾಜೇಂದ್ರ ಪುರಭವನದ ಆವರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೇತೃತ್ವದಲ್ಲಿ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಟ್ಟಿದ್ದ ವಿಶ್ವ ತಂಬಾಕು ರಹಿತ ದಿನಾಚರಣೆ-2017 ನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡುತ್ತಿದ್ದರು.

ತಂಬಾಕು ಸೇವನೆಯಿಂದ ಕ್ಯಾನ್ಸರ್‌ನಂತಹ ಮಾರಕ ರೋಗಗಳು ಬರುತ್ತವೆ. ಇದರಿಂದ ಸಂಬಂಧಿಸಿದ ವ್ಯಕ್ತಿ ಆರೋಗ್ಯ ಕಳೆದುಕೊಳ್ಳುತ್ತಾನೆ. ಆಗ ಆತನ ಕುಟುಂಬ ವರ್ಗ ಎಲ್ಲ ರೀತಿಯ ಸಂಕಷ್ಟಗಳಿಗೆ ಒಳಗಾಗುತ್ತದೆ. ರೋಗಿಗಳ ಶುಶ್ರೂಷೆ ಇತ್ಯಾದಿಗಳಲ್ಲಿ ಸರ್ಕಾರದ ಹಣವೂ ವೆಚ್ಚವಾಗುತ್ತಿರುತ್ತದೆ. ಅಂತಿಮವಾಗಿ ರೋಗಿ ಮೃತಪಟ್ಟರೆ, ಆತನ ಕುಟುಂಬಕ್ಕಷ್ಟೇ ಅಲ್ಲದೆ, ದುಡಿಯುವ ವ್ಯಕ್ತಿಯನ್ನು ಕಳೆದು ಕೊಂಡು ದೇಶಕ್ಕೂ ಆರ್ಥಿಕವಾಗಿ ಹಾನಿ ಆಗುತ್ತದೆ ಎಂದು ಅವರು



ವಿಶ್ಲೇಷಿಸಿದರು.

1980-90 ರ ದಶಕದಲ್ಲಿ ವಿದ್ಯಾರ್ಥಿ ವೃಂದದಲ್ಲಿ ಸಿಗರೇಟು ಸೇವನೆ ಒಂದು ರೀತಿಯ ಸ್ಟೈಲ್ ಆಗಿ ಹೋಗಿತ್ತು. ಆದರೆ ಇಂದು ಕಾಲ ಬದಲಾಗಿದೆ. ವಿದ್ಯಾರ್ಥಿಗಳಲ್ಲಿ ಸಿಗರೇಟ್ ಸೇವನೆ ಬಗ್ಗೆ ಹೆಚ್ಚಿನ ಒಲವಿಲ್ಲವೆಂಬುದು ವಿದ್ಯಾರ್ಥಿಗಳೊಂದಿಗಿನ ಸಂವಾದದಲ್ಲಿ ಕಂಡು ಬರುತ್ತಿದೆ. ನಿಜಕ್ಕೂ ಇದೊಂದು ಆಶಾದಾಯಕ ಬೆಳವಣಿಗೆ ಆಗಿದೆ ಎಂದು ಅವರು ಸಂತಸದಿಂದ ಹೇಳಿದರು. ವಿಶ್ವ ತಂಬಾಕು ದಿನಾಚರಣೆಗೆ ಸಾಮಾಜಿಕ ಹಿತದೃಷ್ಟಿಯಿಂದ ವ್ಯಾಪಕ ಪ್ರಚಾರ ನೀಡಬೇಕಾಗಿದೆ. ನಮ್ಮ ಸುತ್ತಮುತ್ತಲಿನಲ್ಲಿ ಪರಿಚಿತರು ತಂಬಾಕು ಉತ್ಪನ್ನಗಳನ್ನು ಬಳಸುತ್ತಿದ್ದರೆ, ಅವರಿಗೆ ಅರಿವು ಮೂಡಿಸಿ ಇವುಗಳನ್ನು ಬಳಸದಂತೆ ಮಾಡಬೇಕು. ಆದಕಾರಣ ಇದು ಸಾಂಕೇತಿಕ ಕಾರ್ಯಕ್ರಮವಾಗಿದೆ, ನಿರಂತರವಾಗಿ ಅರಿವು ಮೂಡಿಸುವಂತಹ ಕಾರ್ಯಕ್ರಮವಾಗಿದೆ ಎಂದು ಕೆ.ಜಿ. ಶಾಂತಾ ರಾಮ್ ಹೇಳಿದರು.

ಸಭಿಕರಿಗೆ ಪ್ರತಿಜ್ಞಾ ವಿಧಿ ಬೋಧಿಸಿದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಾಬಾ ಸಾಹೇಬ್ ಎಲ್.ಜಿನರಾಳ್ಕರ್ ಅವರು ಮಾತನಾಡಿ, ಆರೋಗ್ಯಪೂರ್ಣವಾದ ವ್ಯಕ್ತಿ, ಕುಟುಂಬ, ಸಮಾಜ ಹಾಗೂ ದೇಶದ ನಿರ್ಮಾಣಕ್ಕಾಗಿ ಪ್ರತಿಯೊಬ್ಬರೂ ತಂಬಾಕು ಉತ್ಪನ್ನಗಳ ಸೇವನೆಯಿಂದ ದೂರವಿರಬೇಕಾದ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ತಂಬಾಕು ಬಳಸಿ ಕ್ಯಾನ್ಸರ್ ಮತ್ತಿತರ ಮಾರಣಾಂತಿಕ ರೋಗಗಳಿಗೆ ಬಲಿಯಾಗುವವರ ಸಂಖ್ಯೆಗಳನ್ನು ಉಲ್ಲೇಖಿಸಿದ ಅವರು, ಇಂದು ವಿಶೇಷವಾಗಿ 20 ರಿಂದ 30 ವರ್ಷ

### ಪ್ರತಿಜ್ಞಾ ವಿಧಿ ಸ್ವೀಕಾರ

**ಭವ್ಯ ಭಾರತದ ಸತ್ಪ್ರಜೆಯಾದ ನಾನು, ತಂಬಾಕು ಅಥವಾ ಅದರ ಉತ್ಪನ್ನಗಳ ಉಪಯೋಗದಿಂದಾಗುವ ಅನಾಹುತಗಳ ಬಗೆಗೆ ಸಂಪೂರ್ಣ ಅರಿವನ್ನು ಹೊಂದಿದ್ದು; ಯಾವುದೇ ರೀತಿಯಲ್ಲಿ ಅವುಗಳ ಪ್ರಭಾವಕ್ಕೆ ಒಳಗಾಗದೆ ಮತ್ತು ಯಾವುದೇ ರೀತಿಯಲ್ಲಿ ಅವುಗಳ ಬಳಕೆಯನ್ನು ಉತ್ತೇಜಿಸುವ ಅಥವಾ ಪ್ರೇರೇಪಿಸುವ ಕಾರ್ಯಕ್ಕೆ ಮುಂದಾಗದೆ ನನ್ನ, ನನ್ನ ಕುಟುಂಬದ ಹಾಗೂ ನನ್ನ ನಾಡಿನ ಸ್ವಾಸ್ಥ್ಯ ಹಾಗೂ ಘನತೆಯನ್ನು ಎಚ್ಚರದಿಂದ ಕಾಯ್ದುಕೊಂಡು, ಹೊಣೆಗಾರಿಕೆಯಿಂದ ನಡೆದುಕೊಳ್ಳುವೆನೆಂದು ಈ ಮೂಲಕ ಪ್ರಮಾಣ ಮಾಡುತ್ತೇನೆ.**

ವಯೋಮಾನದ ಯುವಜನರು ತಂಬಾಕಿನ ದುಶ್ಚಟಕ್ಕೀಡಾಗಿ ಸಾವು-ನೋವು ಅನುಭವಿಸುತ್ತಿದ್ದಾರೆಂದು ವಿಷಾದದಿಂದ ಉದ್ಗರಿಸಿದರು.

ಮುಖ್ಯ ಅತಿಥಿಗಳಾಗಿದ್ದ ಹೆಚ್ಚುವರಿ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ (ಇನ್‌ಚಾರ್ಜ್) ನಾಗರಾಜ್ ಅವರು ಮಾತನಾಡುತ್ತಾ, ಇಂದು ಕಾಲ ಬದಲಾಗುತ್ತಿದೆ. >>> 6ನೇ ಪುಟಕ್ಕೆ




# ತಹಸೀಲ್ದಾರ್ ನ್ಯಾಯಾಲಯಗಳಲ್ಲಿ ಆದೇಶಕ್ಕೆ ಕಾದಿವೆ 82 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳು 2597

♦**ಭೂಷಣ್ ಮಿಡಿಗೇಶಿ**

(ಭಾಗ-2)

**ತುಮಕೂರು**

ಸಾಮಾನ್ಯವಾಗಿ ಭೂಮಿ ವಿವಾದಗಳಿಗೆ ಸಂಬಂಧಿಸಿದ ವ್ಯಾಜ್ಯಗಳು ಗ್ರಾಮೀಣ ಮಟ್ಟದಲ್ಲಿ ಬಗೆಹರಿಯುವುದು ಬಹು ತ್ರಾಸದಾಯಕ ಕೆಲಸವೇ ಸರಿ.ಎಷ್ಟೋ ಬಾರಿ ಸಣ್ಣ ತಪ್ಪುಗಳನ್ನು ಕುಟುಂಬದ ಮಟ್ಟದಲ್ಲಿಯೇ ಬಗೆ ಹರಿಸಿಕೊಳ್ಳುವ ಹಾಗಿದ್ದರೂ,ಸ್ವಪ್ರತಿಷ್ಠೆ ಮತ್ತಿತರ ಅವಗುಣಗಳಿಂದಾಗಿ ಯಾರ ಮಾತನ್ನೂ ಕೇಳದೆ ನ್ಯಾಯಾಲಯದ ಮೆಟ್ಟಿಲು ಹತ್ತಿ ಇಲ್ಲದ ಅವಸ್ಥೆ ಪಡುವಂತಾಗುತ್ತದೆ. ಹಳ್ಳಿಗಳಲ್ಲಿರುವ ಹಿರಿಯರು ಹಾಗೂ ಊರಿನ ಆಗುಹೋಗುಗಳನ್ನು ಮತ್ತು ಜಮೀನುಗಳನ್ನು ಮೊದಲಿನಿಂದಲೂ ಬಲ್ಲವರ ಬಳಿ ಕುಳಿತುಕೊಂಡು ಗೊಂದಲ ನಿವಾರಿಸಿಕೊಂಡರೆ ಒಳಿತು. ಇದರಿಂದ ಹಲವಾರು ವರ್ಷ ವೃಥಾ ಕೋರ್ಟು ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ. ಹಣಕಾಸಿನ ಜೊತೆ ಸಮಯದ ಉಳಿತಾಯವೂ ಆಗುತ್ತದೆ.ಮಾನಸಿಕ ನೆಮ್ಮದಿಯೂ ಸಿಗುತ್ತದೆ.ಇದನ್ನು ಜನತೆ ಅರಿತುಕೊಂಡಾಗಮಾತ್ರ ಇಂತಹವ್ಯಾಜ್ಯಗಳು ಗ್ರಾಮೀಣ ಮಟ್ಟದಲ್ಲಿಯೇ ಬಗೆಹರಿದು ಸುಖಾಂತ್ಯವನ್ನು ಕಾಣಬಹುದಾಗಿದೆ. ಇಲ್ಲವಾದರೆ ನ್ಯಾಯಾಲಯದ ಮೆಟ್ಟಿಲೇರಿ ಸಂಕಷ್ಟಕ್ಕೀಡಾಗುವ ಪರಿಸ್ಥಿತಿ ತಲೆದೋರುತ್ತದೆ.

**ಭೂವಿವಾದಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರ್ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ವಿವರ**

| ತಾಲ್ಲೂಕು | ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಅವಧಿವಾರು ವಿವರ | | | |
|---|---|---|---|---|
| | 1 ವರ್ಷ ಒಳಗಿನ | 2 ವರ್ಷ ಒಳಗಿನ | 2ವರ್ಷ ಮೇಲ್ಪಟ್ಟಿರುವ | ಒಟ್ಟು ಬಾಕಿ |
| ತುಮಕೂರು | 118 | 120 | 232 | 470 |
| ಗುಬ್ಬಿ | 59 | 44 | 21 | 124 |
| ಕುಣಿಗಲ್ | 03 | - | - | - |
| ತಿಪಟೂರು | 78 | 114 | 46 | 238 |
| ತುರುವೇಕೆರೆ | 44 | 04 | - | 48 |
| ಚಿ.ನಾ.ಹಳ್ಳಿ | 142 | 65 | - | 207 |
| ಮಧುಗಿರಿ | 427 | 48 | 49 | 524 |
| ಕೊರಟಗೆರೆ | 97 | 05 | 01 | 103 |
| ಶಿರಾ | 200 | 150 | 121 | 471 |
| ಪಾವಗಡ | 231 | 138 | 40 | 409 |
| ಒಟ್ಟು | 1399 | 688 | 510 | 2597 |

ತುಮಕೂರು ತಾಲ್ಲೂಕಿನ ತಹಶೀಲ್ದಾರರ ನ್ಯಾಯಾಲಯದಲ್ಲಿ ಕಳೆದ ಮೂರು ತಿಂಗಳ ಅವಧಿಯಲ್ಲಿ 19 ಅರ್ಜಿಗಳು ಭೂವಿವಾದಗಳ ಇತ್ಯರ್ಥಕ್ಕೆಂದು ನ್ಯಾಯಾಲಯಕ್ಕೆ ಸಲ್ಲಿಕೆಯಾಗಿವೆ.ಇವುಗಳಲ್ಲಿ ಒಂದು ವರ್ಷದ ಒಳಗಿನ ಅವಧಿಯ 99 ಅರ್ಜಿಗಳು ವಿಲೇವಾರಿಯಾಗಲು ಬಾಕಿ ಉಳಿದುಕೊಂಡಿದ್ದು,2 ವರ್ಷಕ್ಕಿಂತ ಒಳಗಿನ ಅವಧಿಯ ಸುಮಾರು 120 ಮತ್ತು 2 ವರ್ಷಕ್ಕಿಂತಲೂ ಹೆಚ್ಚಿನ ಕಾಲಾವಧಿಯ 232 ಅರ್ಜಿಗಳು ನ್ಯಾಯಾಲಯದಲ್ಲಿ, ಯಾವುದೇ ತೀರ್ಮಾನವನ್ನೂ ಕಾಣದೆ ಹಾಗೆಯೇ ಉಳಿದುಕೊಂಡಿವೆ.ಒಟ್ಟಾರೆಯಾಗಿ 470 ಪ್ರಕರಣಗಳ ಇತ್ಯರ್ಥಕ್ಕೆ ಜನ ಕಾಯುತ್ತಿರುವ ಮಾಹಿತಿ ಇದೆ. ತುಮಕೂರು ತಾಲ್ಲೂಕಿನ ಬಹುತೇಕ ಹತ್ತರಿಂದ ಹದಿನೈದು ಗ್ರಾಮಪಂಚಾಯ್ತಿಯ ನೂರಾರು ಹಳ್ಳಿಗಳು ನಗರೀಕರಣದ ಪ್ರಭಾವದಿಂದಾಗಿ ಭೂಮಿಯ ಬೆಲೆಯನ್ನು ಹೆಚ್ಚಿಸಿಕೊಂಡಿದ್ದು,ತಕರಾರುಗಳ ಸಂಖ್ಯೆಯೂ ಜಾಸ್ತಿಯಾಗಲು ಕಾರಣವೆನ್ನಬಹುದು.

ಗುಬ್ಬಿ ತಾಲ್ಲೂಕಿನಲ್ಲಿ 124 ಪ್ರಕರಣಗಳು ತಹಸೀಲ್ದಾರರ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿರುವುದು ಕಂಡುಬಂದಿದೆ.ಕಳೆದ ಮೂರು ತಿಂಗಳ ಅವಧಿಯಲ್ಲಿ 23 ಅರ್ಜಿಗಳು ನ್ಯಾಯಾಲಯಕ್ಕೆ ಸಲ್ಲಿಕೆಯಾಗಿವೆ. ಇವುಗಳನ್ನು ಹೊರತುಪಡಿಸಿದರೆ, ವಿಚಾರಣೆಗೆ ಬಾಕಿ ಇರುವ >>> 6ನೇ ಪುಟಕ್ಕೆ

